ಇಂತ ಒಂದಷ್ಟು ಯಡವಟ್ಟುಗಳಿಗೆ ದೊಡ್ಡಪ್ಪನ ಮಗನ ಕೈವಾಡ ಹುಟ್ಟಿಕೊಂಡು ಮಾತಿಗೆ ಮಾತಿನ ಒಯ್ದಾಟದಲ್ಲಿ ಅಪ್ಪನ ಯಜಮಾನಿಕೆ ಸರಿಯಿಲ್ಲವೆಂಬ ಅಪಸ್ವರಗಳು ಹುಟ್ಟಿಕೊಂಡವು. ಇಂತಿಂತ ಅಪವಾದಕ್ಕೆ ತಲೆ ಕೊಡುದಂಗೆ ಅಪ್ಪ ಕುಗ್ಗದೆ ಯಜಮಾನಿಕೆ ನಡೆಸುತ್ತಿದ್ದ.ಈಗ್ಗೆ ಎರಡು ತಿಂಗಳ ಕೆಳಗಿನ ಜಾತ್ರೆಯೊಂದರಲ್ಲಿ ಪಾಂಪ್ಲೇಟಿನೊಳಗೆ ಅಪ್ಪನ ಹೆಸರನ್ನ ಬೇಕಂತಲೇ ಕೈಬಿಡಿಸಿ ಹೊಡೆಸಿದ್ದ ದೊಡ್ಡಪ್ಪನ ಮಗನ ಎಡವಟ್ಟಿಗೆ, ಇನ್ನು ನನ್ನೆಸರೆ ಇಲ್ಲವೆಂದ ಮ್ಯಾಲೆ ನಾನಿನ್ಯಾಕೆ ಇರ್‌ ಬೇಕು ಈ ಮುಠ್ಠಾಳ್‌ ನನ್ಮಕ್ಕಳ ಮಧ್ಯೆ ನೊಣ ಹೊಡಿಬೇಕ? ಅಪ್ಪ ಇನ್ನಿಲ್ಲದೆ ಕೂಗಾಡಿ ಮೊನ್ನೆ ಸಲದ ಜಾತ್ರೆಗೆ ಊರಿನ ಕಡೆ ಹೋಗೇ ಇರಲಿಲ್ಲ. ಇಂತ ಹಲವಾರು ಕಾರ್ಯಕಲಾಪಗಳಲ್ಲಿ ಅಪ್ಪನಿಗೆ ಮೊದಲಿಂದಲು ಜೊತೆಯಲ್ಲಿದ್ದವರೇ ಕಾಲೆಳೆಯುವ ಕೆಲಸಗಳನ್ನ ಮಾಡಲು ಮುಂದಾದರು. ಇಂಗೆ ಸದಾ ಇಸ್ತ್ರಿ ಉಜ್ಜಿಸಿದ ಜಗಮಗನೆಂಬ ಬಿಳಿಯ ಬಟ್ಟೆಗಳನ್ನ ಧರಿಸಿಕೊಂಡು ನಾನಿರೊತನಕ ನನ್ನೆಸರು ಕೆಡಬಾರದೆಂದು ಹಂಬಲಕ್ಕೆ ಬಿದ್ದಿದ್ದ ಅಪ್ಪನಿಗೆ, ಅವನ ಯಜಮಾನಿಕೆಯ ಹೆಸರಿಗೆ ಆಗಾಗ ಮಸಿ ಬಳಿಯಲು ಮುಂದಾದ ಅಣ್ಣ ತಮ್ಮಗಳ ನಡುವೆ ಅಪ್ಪನಿಗೆ ಮುಖ ಭಂಗವಾಗತೊಡಗಿತು.



ಇಷ್ಟರ ನಡುವೆ ಅಣ್ಣ ಅಲ್ಲೇ ವೈಟ್‌ಫೀಲ್ಡಿನಲ್ಲಿ ಲಿಫ್ಟಿರುವ ವೈಭೋಗದ ಮನೆ ಕಟ್ಟಿಸಿಬಿಟ್ಟ. ನಮ್ಮೆಲ್ಲರಿಗೂ ಹೊಸಾ ಬಟ್ಟೆಯನ್ನು ಕೂಡ ಖರೀದಿಸಿದ. ಇನ್ನೇನು ವಾರವಿದ್ದಂಗೆ, ‘ಲೇ ಪವನ ಗೃಹಪ್ರವೇಶದ ಕಾರ್ಡ ಹೊಡಿಸಿದ್ದೀಯೇನೊ?’ ಅಪ್ಪ ಈಕಡೆಯಿಂದ ಫೋನಾಯಿಸಿದ. ಅಣ್ಣ, ‘ಊನಪ್ಪ ಸಾಯಂಕಾಲ ತಗಂಬರ್‌ತಾ ಇದ್ದೀನಿ’ ಎಂದು ಉತ್ತರಕೊಟ್ಟ. ಅಲ್ಲವ್ರೊ ನಮಗ್‌ ಕೊಡೋದಲ್ಲಪ್ಪ ನಮ್ಮೂರಿನ ಕುಲೋಸ್ತರಿಗೆಲ್ಲ ಕೊಡಬೇಕು. ಅದಿಕ್ಕೆ ಊರೀಗೋಗಾನೆಂದು ಅಪ್ಪ ಇನ್ನಿಲ್ಲದ ಆನಂದದಿಂದ ಹೇಳಿಕೊಂಡಿದ್ದವನಿಗೆ, ಅಣ್ಣಯ್ಯನ ಗೃಹಪ್ರವೇಶದ ಕಾರ್ಡಿನ ಕಡೆ ಅಪ್ಪನ ಮನಸ್ಸು ಹೊರಳತೊಡಗಿ ಆ ರಾತ್ರಿ ನೆಟ್ಟಗೆ ನಿದ್ದೆ ಬರಲಿಲ್ಲ, ಯಾವ ನಿಲಯವೆಂದು ಹೆಸರಿಟ್ಟವನೋ ಏನೋ? ನಮ್ಮೆಸರನ್ನ ಮ್ಯಾಲೆ ಹಾಕ್‌ಸವನೊ ಕೆಳಗಾಕಸವನೊ? ಎಂಬ ಕಾಳಜಿಯ ಕಂಟು ಸುತ್ತಿಕೊಂಡು ಅಪ್ಪ ಹಾಸಿಗೆಯಲ್ಲಿ ನೆಟ್ಟಗೆ ನಿದ್ದೆ ಮಾಡದಾದ. ಅಣ್ಣಯ್ಯ ಆವತ್ತಿನ ಮಧ್ಯಾನವೆ ಹನ್ನೆರೆಡು ಗಂಟೆಯ ಹೊತ್ತಿಗೆ ಅತ್ತಿಗೆಯನ್ನು ಕರೆದುಕೊಂಡು ಕಾರಿನಲ್ಲಿ ಇಳಿದು ಸೀದಾ ಮನೆಗೆ ಬಂದವರು, ಒಳಕ್ಕೋಗಿ ಡೈನಿಂಗ್ ಟೇಬಲ್ಲಿನ ಮ್ಯಾಲೆ ಕಾರ್ಡಗಳನ್ನಿಟ್ಟರು. ಎಲ್ಲರೂ ಹಿಂದಿನ ದಿನವೇ ಬಂದುಬಿಡಿ ಎಂದೇಳಿದವರು ಹತ್ತಾರು ಕೆಲಸಗಳಿವೆಯೆಂದು ಮನೆಯಲ್ಲಿ ಹತ್ತು ನಿಮಿಷವು ನೆಟ್ಟಗೆ ಕುಂತುಕೊಳ್ಳದೆ ಹೊರಟೇಬಿಟ್ಟಿದ್ದರು. ಅಪ್ಪ ಕಾರ್ಡಗಳನ್ನ ಕೈಗೆ ತರಿಸಿಕೊಂಡು ನೋಡ್‌ತ್ತಾನೆ ಬರಿ ಅಂಗೈಅಗಲವಿರುವ ಕಾರ್ಡು ಅದರಲ್ಲಿ ಯಾವ ದೇವರೆಸರು ಇರಲಿಲ್ಲ ದಿಂಡರೆಸರು ಇರಲಿಲ್ಲ, ಜೊತಿಗೆ ಅಪ್ಪ ಅಮ್ಮನೆಸರಾಗಿ ಒಂದಕ್ಷರವು ಇರಲೇ ಇಲ್ಲ. ಅಂಗು ಇಂಗು ಏಳನೆ ತರಗತಿ ಪಾಸು ಮಾಡಿಕೊಂಡಿದ್ದ ಅಮ್ಮ ಕಾರ್ಡನ್ನು ತಿರುವಿ ತಿರುವಿ, ‘ನೋಡೀರಾ ಹೆಸರು ಹೆಸರು ಅಂತ ಒದ್ದಾಡತಿದ್ದೆ ಇವತ್ತು ನೀನುಟ್ಟಿಸಿರೊ ಮಗನೆ ನಿನ್ನೆಸರೇಳತಿಲ್ಲ. ಜಾತ್ರೆ ಹೊತ್ತಿನಲ್ಲಿ ನನ್ನೆಸರೆ ಹಾಕ್‌ಸಿಲ್ಲ ಅಂತ ಕುಲೋಸ್ತ್ರ ಮ್ಯಾಲೆಲ್ಲ ಕಚ್ಚಾಡ್‌ ಬಂದಲ್ಲ, ನೋಡಾನ ನೀನೆ ಹುಟ್ಟಿಸಿರೊ ನಿನ್ನಮಗನ್‌ ಮ್ಯಾಲು ಅಂಗೆ ಜಗಳಕ್ಕೋಗು ಗೊತ್ತಾಗ್‌ತೈತೆ’ ಎಂದು ಮೂದಲಿಸಿದ ಅಮ್ಮನ ಮಾತಿನಲ್ಲಿ ಸಣ್ಣದೊಂದು ಸಂಕಟವೂ ಇತ್ತು. ಅಪ್ಪ ದೂಸರ ಯಾವ ಉತ್ತರವು ಕೊಡಲಿಲ್ಲ. ಮಗ ನಾಲಕ್ಕಂತಸ್ತು ಮನೆ ಕಟ್ಟಿಸವನೆ ನಡೀರ್ರೀ ಎಲ್ಲರು ಹೋಗಾನ ಎಂದು ಈಸು ದಿನದಿಂದ ಹೇಳಿಕೊಂಡು ಬಂದಿದ್ದ ಊರಿನ ಸ್ನೇಹಿತರಿಗೆ, ಅಣ್ಣ, ತಮ್ಮಂದಿರುಗಳಿಗೆ ಇಂತಾ ಕಾರ್ಡುಗಳನ್ನ ಎಂಗೆ ಹಂಚಬೇಕೆಂದು, ಆತನ ಹೆಸರಿಲ್ಲದಿದ್ದ ಮ್ಯಾಲೆ ಯಾವ ಕಾರ್ಯಕ್ರಮಕ್ಕೂ ಅಷ್ಟು ಸಲೀಸಾಗಿ ಹೋಗದಿದ್ದವನು, ಈಗ ಹೆಸರಿಲ್ಲದ ಅಂಗೈಯ್ಯಗಲದ ಇಂತ ಹೆಸರು ಕುಲಗೋತ್ರ ಯಾವುದೂ ಇಲ್ಲದ ತಬ್ಬಲಿ ಕಾರ್ಡುಗಳನ್ನ ಊರಿನಲ್ಲಿ ಯಾರಿಗಂಚಬೇಕೆಂಬ ಚಿಂತೆಯೊಳಗೆ ಸೋಫಾ ಮ್ಯಾಲೆ ಕುಂತವನು ಎಷ್ಟೊ ಹೊತ್ತಾದರೂ ಮ್ಯಾಲಕ್ಕೇಳ್ಳೇ ಇಲ್ಲ. ●